ಶ್ರೀ ಜೆ. ಸಿ. ಮಾಧುಸ್ವಾಮಿ :– ಟೇಬಲ್ ಮೇಲೆ ಬಂದಿದೆ, ಅದು ಅಲ್ಲಿ ಹೋಗಿ ನಮಗೆ ಬರಬೇಕು. ಅವರು ಉತ್ತರ ಕೊಡುವುದಕ್ಕೆ ಶುರು ಮಾಡಿದಾಗ ಕೊಡಬೇಕು, ಆದರೆ ಮೊದಲೇ ಕೊಟ್ಟುಬಿಟ್ಟಿದ್ದಾರೆ.

ಉಪಾಧ್ಯಕ್ಷರು :– ಹಾಗೇನಿಲ್ಲ, ಮಾಧುಸ್ವಾಮಿಯವರೇ ಸುಮ್ಮನೆ ಏಕೆ....

SRI J. C. MADHUSWAMY : He has to reply.

ಉಪಾಧ್ಯಕ್ಷರು :– ಸೋಮವಾರ ತೆಗೆದುಕೊಳ್ಳಿ.

ಶ್ರೀ ಜಿ. ಎ. ಶ್ರೀರಾಮರೆಡ್ಡಿ :– ಸೋಮವಾರದ ಪ್ರಶ್ನೆ ಅಲ್ಲ. ಫುಡ್ ಅಂಡ್ ಸಿವಿಲ್ ಸಪ್ಲೈಸ್.

ಉಪಾಧ್ಯಕ್ಷರು :– ಅವರು ಇಲ್ಲವಲ್ಲಾ.

ಶ್ರೀ ಜಿ. ಎ. ಶ್ರೀರಾಮರೆಡ್ಡಿ :– ಯಾರಾದರೂ ಇದನ್ನು ಓದಿ ಕ್ಲೋಸ್ ಮಾಡಿ ದಯವಿಟ್ಟು ಕ್ಷಮಿಸಿ, ಒಂದು ಸಲ ಟೇಬಲ್ ಮೇಲೆ ಮಂಡಿಸಿದ ಮೇಲೆ ಸಚಿವರು ಹೇಳಿಕೆ ಕೊಡಬೇಕಾಗುತ್ತದೆ.

ಶ್ರೀ ಜೆ. ಸಿ. ಮಾಧುಸ್ವಾಮಿ :– ಟೇಬಲ್ ಮೇಲೆ ಮಂಡಿಸಿದ ಮೇಲೆ ನಾಳೆ ತೆಗೆದುಕೊಳ್ಳುವುದಕ್ಕೆ ಹೇಗೆ ಆಗುತ್ತದೆ?

ಉಪಾಧ್ಯಕ್ಷರು :– ಈಗ ಮಂತ್ರಿಗಳು ಇಲ್ಲವಲ್ಲಾ.

ಶ್ರೀ ಜೆ. ಸಿ. ಮಾಧುಸ್ವಾಮಿ :– ಇನ್ನು ಯಾರಾದರೂ ಹೇಳಲಿ ಬಿಡಿ.

ಉಪಾಧ್ಯಕ್ಷರು :– ಓದಿ, ಐದು ನಿಮಿಷ...

ಶ್ರೀ ಜಿ. ಎ. ಶ್ರೀರಾಮರೆಡ್ಡಿ :– ಸರ್ಕಾರದಿಂದ ಬೇರ ಯಾರಾದರೂ ಹೇಳಲಿ.

ಉಪಾಧ್ಯಕ್ಷರು :– ಎಷ್ಟೊತ್ತು ಬೇಕಾಗುತ್ತದೆ ಇದಕ್ಕೆ?

ಶ್ರೀ ಜಿ. ಎ. ಶ್ರೀರಾಮರೆಡ್ಡಿ :– ಅವರು ರಿಟನ್ ಆನ್ಸರ್ ಕೊಟ್ಟಿದ್ದಾರೆ. ಅದಕ್ಕೆ ಸದನದಲ್ಲೆ ಅವರು ಹೇಳಿಕೆ ಕೊಡಬೇಕು.

(ಗೊಂದಲ)

ಉಪಾಧ್ಯಕ್ಷರು :– ಪ್ರಾರಂಭ ಮಾಡಿ, ಅಲ್ಲಿಯವರೆಗೂ ಗಮನ ಸೆಳೆಯುವ ಸೂಚನೆ....

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಮಾನ್ಯ ಉಪಾಧ್ಯಕ್ಷರೆ, ಸಿ. ಟಿ. ರವಿ ಯವರದು, 15 ದಿವಸದಿಂದ ಒಂದು ಹೋರಾಟ ನಡೆಯುತ್ತಿದೆ.

ಉಪಾಧ್ಯಕ್ಷರು :– ಯಾವತ್ತು ಹೋರಾಟ....

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಏನು ಮಾಡುವುದು ಈ ಸರ್ಕಾರದ ದುಸ್ಥಿತಿ...

ಉಪಾಧ್ಯಕ್ಷರು :– ಯಾವಾಗಲೂ ಹೋರಾಟ ನಿಮ್ಮದು.....

(ಇ) ವಿಷಯ:– ಸರ್ವೇಯರ್‌ನಲ್ಲಿ ತರಬೇತಿ ಪಡೆದ ಯುವಕರು ಸ್ವಂತ ಉದ್ಯೋಗ ಮಾಡುವ ಬಗ್ಗೆ

ಶ್ರೀ ಸಿ. ಟಿ. ರವಿ (ಚಿಕ್ಕಮಗಳೂರು) :– ಮಾನ್ಯ ಉಪಾಧ್ಯಕ್ಷರೆ, ಅದು ಹಾಗಲ್ಲ, ಪರವಾನಗಿ ಕೊಟ್ಟಿದ್ದೇ ಸರ್ಕಾರ. ನೀವು ನಿರುದ್ಯೋಗಿ ಯುವಕರಿದ್ದೀರಿ, ಸರ್ವೇಯರ್‌ನಲ್ಲಿ ತರಬೇತಿ ಪಡೆದಿದ್ದೀರಿ. ಸ್ವಂತ ಉದ್ಯೋಗ ಮಾಡಿ ಎಂದು ಹೇಳಿ ಆದೇಶ ಹೊರಡಿಸಿ, ಅವರಿಗೆ ಪರವಾನಗಿ ಕೊಟ್ಟು ಈಗ ಒಂದು ತಿಂಗಳು ಅವರು ಕಾರ್ಯನಿರ್ವಹಿಸುತ್ತಿದ್ದ ಹಾಗೆ ಮತ್ತೊಂದು ಮರು

ಆದೇಶ ಹೊರಡಿಸಿ, ನೊಂದಣಿ ಮಾಡುವ ಸಂದರ್ಭದಲ್ಲಿ ನಿಮಗೆ ನಕ್ಷೆ ಅವಶ್ಯಕತೆ ಇಲ್ಲವೆಂದು ಹೇಳಿ ಮತ್ತೊಂದು ಆದೇಶ ಹೊರಡಿಸಿದ್ದರಿಂದಾಗಿ ಇವತ್ತು ಈ ಎಲ್ಲಾ...

ಉಪಾಧ್ಯಕ್ಷರು :– ಇದನ್ನು ಸೋಮವಾರಕ್ಕೆ ಇಟ್ಟುಕೊಳ್ಳಿ. ಈಗ ರೆವಿನ್ಯೂ ಮಂತ್ರಿಗಳು ಇಲ್ಲ. ಈಗ ಕಾಲಿಂಗ್ ಅಟೆನ್‌ಷನ್ ತೆಗೆದುಕೊಳ್ಳೋಣ. ಈಗ ರಾಜೇಂದ್ರವರ್ಮ.

ಶ್ರೀ ಎಂ. ಪಿ. ರೇಣುಕಾಚಾರ್ಯ :– ಮಾನ್ಯ ಉಪಾಧ್ಯಕ್ಷರೇ, ನನ್ನ ಮತಕ್ಷೇತ್ರದಲ್ಲಿ ಕಳೆದ ಒಂದು ತಿಂಗಳಿನಿಂದ ಇಲಿ ಜ್ವರ ಮತ್ತು ಡೆಂಗಿ ಜ್ವರದಿಂದ 11 ಜನರು ಸತ್ತಿದ್ದಾರೆ.

ಉಪಾಧ್ಯಕ್ಷರು :– ಮಾನ್ಯ ರೇಣುಕಾಚಾರ್ಯರೇ, ಏನು ಅದು....

8. ಗಮನ ಸೆಳೆಯುವ ಸೂಚನೆಗಳು.

(ಅ) ವಿಷಯ:– ಬೀದರ್ ಜಿಲ್ಲೆಯ ಆರ್.ಎಸ್.ವಿ.ವೈ. ಯೋಜನೆಯಡಿಯಲ್ಲಿ ಮಂಜೂರಾದ ಕಾಮಗಾರಿಗಳು ಪೂರ್ಣಗೊಳ್ಳುವ ಬಗ್ಗೆ.

ಶ್ರೀ ರಾಜೇಂದ್ರ ವರ್ಮಾ (ಹುಲಸೂರು) :– ಮಾನ್ಯ ಉಪಾಧ್ಯಕ್ಷರೇ, 10ನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಭಾರತ ಸರ್ಕಾರದ ಯೋಜನಾ ಆಯೋಗವು, ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ, ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿ ಮತ್ತು ಸುಧಾರಣೆ ಯೋಜನೆಯಡಿ, ರಾಷ್ಟ್ರೀಯ ಸಮ ವಿಕಾಸ ಎಂಬ ಶೀರ್ಷಿಕೆ ಯೋಜನೆಯನ್ನು ಅನುಷ್ಟಾನಗೊಳಿಸಲು ಒಟ್ಟು ಈ ರಾಷ್ಟ್ರದೊಳಗೆ ಒಟ್ಟು ನೂರು ಜಿಲ್ಲೆಗಳನ್ನು ಆಯ್ಕೆ ಮಾಡಿದ್ದು, ಆ ಪೈಕಿ ಕರ್ನಾಟಕ ರಾಜ್ಯದಲ್ಲಿ ನಾಲ್ಕು ಜಿಲ್ಲೆಗಳು ಅವು ಬೀದರ್, ಗುಲ್ಬರ್ಗಾ, ಚಿತ್ರದುರ್ಗ, ದಾವಣಗೆರೆ, ಆಯ್ಕೆಯಾಗಿತ್ತು. ಈ ಯೋಜನೆಗೆ ಅಡ್ಡಿಯಾಗುವ ಮಾರಕಾಂಶಗಳನ್ನು ತೊಡೆದು ಹಾಕುವುದು, ಮತ್ತು ಅಭಿವೃದ್ಧಿ ಪ್ರಕ್ರಿಯೆ ತ್ವರಿತವಾಗಿ ಜಾರಿಗೆ ಬರುವುದು, ಮತ್ತು ಜನರ ಜೀವನಮಟ್ಟ ಸುಧಾರಣೆ ಮಾಡುವುದು, ಅಸಮತೋಲನೆಯ ನಿವಾರಣೆ, ಈ ಮುಖ್ಯ ಉದ್ದೇಶವನ್ನು ಈಡೇರಿಸಲು ಅನುಷ್ಟಾನಗೊಳಿಸಲಾಗಿದೆ. ಅತ್ಯಂತ ಹಿಂದುಳಿದಂಥ ಈ ಜಿಲ್ಲೆಗಳಲ್ಲಿ ಆರ್ಥಿಕ ಚಟುವಟಿಕೆಗಳು, ಶಿಕ್ಷಣ, ಆರೋಗ್ಯ, ಕೃಷಿ, ತೋಟಗಾರಿಕೆ, ಅರಣ್ಯ, ಪಶುಸಂಗೋಪನೆ, ಸಮಾಜ ಕಲ್ಯಾಣ, ಮಣ್ಣು ಮತ್ತು ಜಲಸಂರಕ್ಷಣೆ, ಕುಡಿಯುವ ನೀರಿನ ಸರಬರಾಜು, ರಸ್ತೆಗಳು, ಯೋಜನೆ, ಸಂಯೋಜನೆ, ಮತ್ತು ಮೌಲ್ಯಮಾಪನ ಮುಂತಾದವುಗಳ ಕಾರ್ಯಕ್ರಮಗಳಿಗೆ ಭಾರತ ಸರ್ಕಾರವು ಈ ಯೋಜನಾ ಆಯೋಗದಿಂದ 2004ನೇ ಸಾಲಿಗೆ ಇಟ್ಟಿದ್ದ 15 ಕೋಟಿ ರೂಪಾಯಿಗಳಲ್ಲಿ 7.5ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಪ್ರತಿವರ್ಷವೂ 15ಕೋಟಿ ರೂಪಾಯಿಗಳಲ್ಲಿ ಮೂರು ವರ್ಷಗಳಿಗೆ 45ಕೋಟಿ ರೂಪಾಯಿಗಳು ವೆಚ್ಚ ಮಾಡುವುದರಿಂದ ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಯಿಂದ ಪ್ರಗತಿ ಸಾಧಿಸುವ ಗುರಿಯನ್ನು ಹೊಂದಲಾಗಿದೆ. ದಿನಾಂಕ: 16.7.2005 ರಂದು ಕೇಂದ್ರಿಯ ಯೋಜನಾ ಆಯೋಗದ ರಾಜ್ಯ ಮಂತ್ರಿಗಳಾದ ಶ್ರೀ ಎಂ. ವಿ. ರಾಜಶೇಖರನ್‌ರವರ ಅಧ್ಯಕ್ಷತೆಯಲ್ಲಿ ಬೀದರ್ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ, ಆರ್.ಎಸ್.ವಿ.ವೈ. ಪ್ರಗತಿಪರ ಶೀಲ ಸಭೆಯು ನಡೆದಿತ್ತು.

ಈ ಸಭೆಯಲ್ಲಿ ಮಂತ್ರಿಗಳಾದ ಶ್ರೀ ಎಂ. ವಿ. ರಾಜಶೇಖರನ್‌ರವರು ಪ್ರಗತಿಯ ಬಗ್ಗೆ ಅಹವಾಲನ್ನು ಕೇಳಿದಾಗ, ಇನ್ನೂ ಕಾಮಗಾರಿಗಳು ಪ್ರಾರಂಭವಾಗುವ ಹಂತದಲ್ಲಿವೆ, ಎಂದು